ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಸದಸ್ಯರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 21/4/21

# ರಾಜ್ಯಪಾಲರ ನೇತೃತ್ವಕ್ಕೆ ಸಿದ್ದು ಆಕ್ಷೇಪ

**ಬೆಂಗಳೂರು:** ಕರೊನಾ ನಿರ್ವಹಣೆ ಸಂಬಂಧ ಮಂಗಳವಾರ ಕರೆಯಲಾಗಿದ್ದ ಸರ್ವಪಕ್ಷ ಸಭೆಯನ್ನು ರಾಜ್ಯಪಾಲರು ಮುನ್ನಡೆಸಿದ್ದಕ್ಕೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತರಾಟೆ ತೆಗೆದುಕೊಂಡಿದ್ದಾರೆ. 'ರಾಜ್ಯಪಾಲರು ಕರೆದಿರುವ ಈ ಸಭೆ ಸಂವಿಧಾನ ಬಾಹಿರ ಎಂಬುದು ನನ್ನ ಅಭಿಪ್ರಾಯ. ಯಡಿಯೂರಪ್ಪನವರು ಇದರ ಬಗ್ಗೆ ಅವರ ವಕೀಲರಿಂದ, ಅಡ್ವೋಕೇಟ್ ಜನರಲ್ ಅವರಿಂದ ಅಭಿಪ್ರಾಯ ಪಡೆದಿದ್ದಾರೋ ಇಲ್ಲವೋ ಗೊತ್ತಿಲ್ಲ. ಸಂವಿಧಾನ ಕುರಿತು ನನಗಿರುವ ಮಾಹಿತಿ ಪ್ರಕಾರ ಸಂವಿಧಾನ ಬಾಹಿರ. ಈ ಸಭೆಯಲ್ಲಿ ರಾಜ್ಯಪಾಲರ ಅಭಿಪ್ರಾಯದಿಂದ ನಿರ್ಣಯ ಮಾಡಲು ಬರಲ್ಲ. ಕೌನ್ಸಿಲ್ ಆಫ್ ಮಿನಿಸ್ಟರ್ ನಿರ್ಧಾರ ಕೈಗೊಳ್ಳಬೇಕಾಗುತ್ತದೆ ಎಂದರು. ಮತ್ತೊಂದೆಡೆ ಕರೊನಾ ಎರಡನೇ ಅಲೆ ಬರುತ್ತದೆ ಎಂಬ ಮಾಹಿತಿ ಇದ್ದರೂ ಕೂಡ ಇಲ್ಲಿವರೆಗೆ ಸರ್ವ ಪಕ್ಷ ಸಭೆ ಕರೆಯದೇ ಇದ್ದದ್ದು, ಅಭಿಪ್ರಾಯ ಸಲಹೆ ಸೂಚನೆ ಪಡೆಯದೇ ಇರುವುದು ತಪ್ಪು. ಜನವರಿ ಮೊದಲ ವಾರ- ಫೆಬ್ರವರಿಯಲ್ಲಿ ಕರೊನಾ ಎರಡನೇ ಅಲೆ ಬರುತ್ತದೆ ಎಂಬ ಶಿಫಾರಸನ್ನು ತಜ್ಞರ ಸಮಿತಿ ವರದಿ ಮಾಡಿದೆ. ಆ ವರದಿ ಬಂದ ಮೇಲಾದರೂ ಸಹ ಇವರು ಎಚ್ಚರವಹಿಸಬೇಕಿತ್ತು. ಕೂಡಲೇ ಸರ್ವಪಕ್ಷ ಸಭೆ ಕರೆಯಬೇಕಿತ್ತು. ತಾಂತ್ರಿಕ ಸಮಿತಿ ವರದಿ ನಿರ್ಲಕ್ಷ್ಯ ಮಾಡಿರುವುದು ಸರ್ಕಾರದ ದೊಡ್ಡ ಅಪರಾಧ ಎನಿಸುತ್ತದೆ ಎಂದರು. ಕಠಿಣ ಕ್ರಮ ಕೈಗೊಳ್ಳುವ ಬದಲು ಚುನಾವಣೆ ರ್‍ಯಾಲಿಗಳಿಗೆ ಅವಕಾಶ ಮಾಡಿಕೊಟ್ಟಿದ್ದೇಕೆ ಎಂದು ಪ್ರಶ್ನಿಸಿದರಲ್ಲದೇ, ಸಚಿವರು, ಸಿಎಂ ಮಧ್ಯೆ ಸಮನ್ವಯ ಇಲ್ಲವೆಂಬ ಸಂಗತಿಯನ್ನು ಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ. ಹಾಗೆಯೇ ಕರೋನಾ ವಿಷಯದಲ್ಲಿ ತಜ್ಞರು ಹೇಳಿದ್ದನ್ನು ಕೇಳಿ ಎಂದು ಸಚಿವರ ಕಿವಿ ಹಿಂಡಿದರು.

